# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

# ಕೆ.ಆರ್.ನಗರ

**ಸಿ.ಮಿಸ್ 314/2023**

***ಪಿ ಡಬ್ಲೂ-1***

| | | |
|---|---|---|
| ಸಾಕ್ಷಿದಾರರ ಹೆಸರು | - | ರುಕ್ಮೀಣಿ |
| ಗಂಡನ ಹೆಸರು | - | ರವಿ ಎಮ್ ವೈ |
| ವಯಸ್ಸು | - | 33 ವರ್ಷ |
| ಕೆಲಸ | - | ಗೃಹಿಣಿ |
| ವಾಸ | - | ಕೆ ಆರ್ ನಗರ |

**ಸಾಕ್ಷಿಯನ್ನು ದಿನಾಂಕ 04-10-2024 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಶ್ರೀ ಪಿ ಡಿ ಅರ್ಜಿದಾರರ ಪರ ವಕೀಲರು**

2 ನೇ ಅರ್ಜಿದಾರಳು ನನ್ನ ಮಗಳು. ಎದುರುದಾರರು ನನ್ನ ಗಂಡ, ದಿಃ 03-03-2019 ರಂದು ನನ್ನ ಹಾಗೂ ಎದುರುದಾರರ ವಿವಾಹವು ಕೆ ಆರ್ ನಗರದ ಸಾಯಿ ಕನವೆನ್ಸಶನ್ ಹಾಲ್ ಕಲ್ಯಾಣ ಮಂಟಪದಲ್ಲಿ ನೇರವೇರಿರುತ್ತದೆ. ಮದುವೆಯ ಮುಂಚೆ ಎದುರುದಾರರಿಗೆ 2,50,000/- ನಗದನ್ನು ನೀಡಿರುತ್ತೇವೆ ಮದುವೆಯ ಸಂದರ್ಭದಲ್ಲಿ ವರದಕ್ಷಿಣೆಯಾಗಿ ಎದುರುದಾರರಿಗೆ 40 ಗ್ರಾಂ ಚಿನ್ನ ಕೊಟ್ಟು ಮದುವೆಯನ್ನು ಅದ್ದೂರಿಯಾಗಿ ಮಾಡಿಕೊಟ್ಟಿರುತ್ತಾರೆ.

2. ನಂತರ 6-7 ತಿಂಗಳು ಕಾಲ ಚೆನ್ನಾಗಿದ್ದೇವೆ. ಆ ಸಂದರ್ಭದ ಲ್ಲಿ ನಾನು ಗರ್ಬಿಣಿಯಾಗಿದ್ದು ಆ ಸಮಯದಲ್ಲಿ ನಮ್ಮ ತಂದೆ ನನಗೆ ನೀಡಿದ್ದ ನಿವೇಶನವನ್ನು ಮಾರಾಟ ಮಾಡಿ ಹಣವನ್ನು ತೆಗೆದುಕೊಂಡು ಬಾ ಎಂದು ನಮ್ಮ ಅತ್ತೆ ಮತ್ತು ಎದುರುದಾರರ ಅಕ್ಕ ಭಾವ ಮತ್ತು ಅಣ್ಣ ಎಲ್ಲರೂ ಸೇರಿ ಎದುರುದಾರರಿಗೆ ಹೇಳಿ ನನಗೆ ಹೊಡೆಸುತ್ತಿದ್ದರು.

3. ಸ್ವಲ್ಪ ದಿನಗಳ ಕಾಲ ನಾನು ಸುಮ್ಮನಿದ್ದು ನಂತರ ಸದರಿ ವಿಚಾರವನ್ನು ನಾನು ನಮ್ಮ ತಂದೆಗೆ ತಿಳಿಸಿರುತ್ತೇನೆ. ನಂತರ ನಮ್ಮ ತಂದೆಯ ಮನೆಯವರು ಸೀಮಂತ ಕಾರ್ಯವನ್ನು ಮುಗಿಸಿ ನನ್ನನ್ನು ತವರು ಮನೆಗೆ ಕರೆದುಕೊಂಡು ಬಂದಿರುತ್ತಾರೆ. ಆ ಸಮಯದಲ್ಲಿ ಎದುರುದಾರರು ಸರಿಯಾಗಿ ಮಾತನಾಡುತ್ತಿರಲಿಲ್ಲ. ನಂತರ ಎರಡನೇ ಅರ್ಜದಾರಳು ಜನಿಸಿದಾಗ ನಮ್ಮ ಅತ್ತೆ ಹೆಣ್ಣು ಮಗು ಆಗಿದೆ ಎಂದು ಬಂದು ನೋಡಲಿಲ್ಲ.

4. ನನ್ನ ಮಗುವಿಗೆ 1 ವರ್ಷವಾಗಿ ನಾಮಕರಣವಾದರೂ ಸಹ ಎದುರುದಾರರ ಮನೆಗೆ ಕರೆದುಕೊಂಡು ಹೋಗಿರುವುದಿಲ್ಲ. ನಂತರ ನಮ್ಮ ತಂದೆ ತಾಯಿ ನನ್ನನ್ನು ಜೊತೆಯಲ್ಲಿಯೇ ಎದುರುದಾರರ ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಎದುರುದಾರರು ನನ್ನನ್ನು ಮೈಸೂರಿನಲ್ಲಿರುವ ಸ್ವಂತ ಮನೆಯಲ್ಲಿದ್ದು ನಂತರ ಬಾಡಿಗೆ ಮನೆಗೆ ಬಲವಂತವಾಗಿ ಹೊಡೆದು ಕರೆದುಕೊಂಡು ಹೋಗಿರುತ್ತಾರೆ.

5. ಸದರಿ ಸಂದರ್ಭದಲ್ಲಿ ಎದುರುದಾರರು ಮನೆಗೆ ಸರಿಯಾರಿ ಬರುತ್ತಿರಲಲ್ಲ. ಎದುರುದಾರರು ದಿನನಿತ್ಯ ಕುಡಿದು ಬಂದು ಗಲಾಟೆ ಮಾಡುತ್ತಿದ್ದರು. ಬಾಡಿಗೆ ಮನೆಗೆ ಸಹ ಎದುರುದಾರರು ಅಣ್ಣ ಮತ್ತು ತಾಯಿಬಂದು ಗಲಾಟೆ ಮಾಡಿರುತ್ತಾರೆ. ಎದುರುದಾರರಿಗೆ ತಿಳಿಸಿದಾಗ ಅವರು ಹೊಂದಾಣಿಕೆ ಮಾಡಿಕೊಂಡು ಹೋಗು ಎಂದು ತಿಳಿಸಿರುತ್ತಾರೆ.

6. ನಂತರ ಸದರಿ ವಿಚಾರವನ್ನು ನಾನು ನಮ್ಮ ತಂದೆ ತಾಯಿಗೆ ತಿಳಿಸಿ ಹಲವಾರು ಬಾರಿ ಪಂಚಾಯಿತಿಯನ್ನು ಮಾಡಿ ತಿಳಿ ಹೇಳಿದರು ಸಹ ನನ್ನನ್ನು ಕರೆದುಕೊಂಡು ಹೋಗಿರುವುದಿಲ್ಲ. ಎದುರುದಾರರು ಬೇರೆ ಹುಡುಗಿಯರು ಜೊತೆ ಮಾಡನಾಡುತ್ತಿದ್ದು, ನಾನು ಕೇಳಿದ್ದಕ್ಕೆ ಗಲಾಟೆ ಮಾಡಿ ಹೊಡೆದಿರುತ್ತಾರೆ.

7. ನಂತರ ದಿಃ 18-06-2023 ರಂದು ನಾನು ಚಿಕಿತ್ಸೆಯನ್ನು ಪಡೆದು ಮಹಿಳಾ ಪೊಲೀಸ್ ಠಾಣೆ ಮೈಸೂರಿನಲ್ಲಿ ದೂರು ಕೊಟ್ಟಿರುತ್ತೇನೆ. ಸದರಿ ಪ್ರಕರಣ ವಿಚಾರಣೆ ಹಂತದಿಲ್ಲಿರುತ್ತದ. ಪ್ರಸ್ತುತ ನಾನು ನಮ್ಮ ತಂದೆತಾಯಿಯ ಜೊತೆಯಲ್ಲಿದ್ದು ನಮ್ಮ ತಂದೆ ತಾಯಿಗೆ ವಯಸ್ಸಾಗಿದ್ದು ಅವರಿಗೆ ಇನ್ನು 3 ಜನ ಮಕ್ಕಳಿದ್ದು ನಮ್ಮ ತಂದೆ ನಿವೃತ್ತ ಕೆ ಎಸ್ ಆರ್ ಟಿ ನೌಕರನಾಗಿದ್ದು ಅವರಿಗೆ ಯಾವುದೇ ಪಿಂಚಣಿ ಬರುವುದಿಲ್ಲ. ಅವರು ಸಹ ಖಾಯಿಲೆಯಿಂದ ಬಳಲುತ್ತಿದ್ದಾರೆ.

8. ಎದುರುದಾರರು ಕೆ ಎಸ್ ಆರ್ ಪಿ ಪೊಲೀಸ್ ಆಗಿದ್ದು ಅವರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು ಅವರಿಗೆ ಮಾಸಿಕವಾಗಿ 70 ಸಾವಿರ ಸಂಬಳ ಬರುತ್ತದೆ. ಎದುರುದಾರರಿಗೆ ಊರಿನಲ್ಲಿ ಜಮೀನು ಇರುತ್ತದೆ. ಎದುರುದಾರರಿಗೆ ಮೈಸೂರಿನಲ್ಲಿ ಸ್ವಂತ ಮನೆಯಿದ್ದು ಬಾಡಿಗೆಗೆ ನೀಡಿರುತ್ತಾರೆ.

9. ನಾನು ಎದುರುದಾರರು ಜೊತೆ ಹೋಗಿ ಜೀವನ ಮಾಡಲು ಸಿದ್ಧಳಿದ್ದು ಅವರು ನನ್ನನ್ನು ಕರೆದುಕೂಂಡು ಹೋಗುತ್ತಿಲ್ಲ. ಆದ್ದರಿಂದ ನನ್ನ ಮತ್ತು ನನ್ನ ಮಗಳ ಜೀವನಾಂಶಕ್ಕೆ ಮಾಸಿಕವಾಗಿ 25 ರಿಂದ 30 ಸಾವಿರ ಖರ್ಚು ಬೇಕಾಗುತ್ತದೆ. ನನಗೆ ನನ್ನ ಮಗುವಿಗೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸುವ ಮುಂಚೆ ಯಾವುದೇ ರೀತಿಯ ಜೀವನಾಂಶವನ್ನು ನೀಡಿರುವುದಿಲ್ಲ. ಆದ್ದರಿಂದ ನನಗೆ ಮತ್ತು 2 ನೇ ಅರ್ಜಿದಾರಳಿಗೆ 30 ಸಾವಿರ ಮಾಸಿಕ ಜೀವನಾಂಶವನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಸಾಕ್ಷಿಗೆ ಒಂದು ವಿವಾಹ ಆಮಂತ್ರಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು **ನಿಪಿ 1** ಎಂದು, ಪ್ರಥಮ ವರ್ತಮಾನ ವರದಿಯನ್ನು **ನಿಪಿ 2** ಎಂದು, ಸಾಕ್ಷಿ 2 ನೇ ಅರ್ಜಿದಾರಳ ಶಾಲಾ ರಸೀದಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾಗಿ **ನಿಪಿ 3** ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಎದುರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

**(ಚಂದನ್ ಎಸ್ )**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ